

# ಅಂಗಿಯೊಳಗೆ ಎಸಿ ಮಾಡುತ್ತೆ ಮೈಬಿಸಿ!

'ಇದೇನಪ್ಪ, ಎಲ್ಲೆಡೆ ಅಬ್ಬರಿಸುತ್ತಿರುವ ಮಳೆರಾಯ ವಾತಾವರಣಕ್ಕೆ ಜನರ ಮೈ ಮುದುಡುವಂತೆ ಮಾಡಿದ್ದಾನೆ. ಹೀಗಿರುವಾಗ ಏರ್ ಕಂಡಿಷನರ್ (ಎ.ಸಿ.) ಬಗ್ಗೆ ಮಾತಾಡ್ತಾ ಇದ್ದಾರೆ' ಅಂತ ಯೋಚಿಸಬೇಡಿ. ಇಲ್ಲಿ ಹೇಳ ಹೊರಟಿರುವುದು ಅಂಗಿಯಂತೆ ಧರಿಸಬಹುದಾದ 'ರಿಯಾನ್ ಪಾಕೆಟ್' ಎಂಬ ಎ.ಸಿ. (ವೇರೆಬಲ್) ಬಗ್ಗೆ. ಬೇಸಿಗೆಗೆ ಮಾತ್ರವಲ್ಲದೆ ಮಳೆಗಾಲ ಹಾಗೂ ಚಳಿಗಾಲಕ್ಕೂ ಇದು ಸಹಕಾರಿ.

ಎ.ಸಿ. ವಾತಾವರಣ ಇಷ್ಟಪಡುವವರು ಹಾಗೂ ಅದಕ್ಕೆ ಹೊಂದಿಕೊಂಡವರು ತಾವು ಹೋದಲ್ಲೆಲ್ಲ, 'ಛೇ, ಎ.ಸಿ. ಇದ್ದಿದ್ದರೆ ಎಷ್ಟು ಚೆಂದ ಇರುತ್ತಿತ್ತು' ಅಂದುಕೊಳ್ಳುತ್ತಾರೆ. ಆದರೆ ಎ.ಸಿ.ಗಳನ್ನು ಹೋದ ಕಡೆಗೆಲ್ಲ ಕೊಂಡೊಯ್ದು ಬಳಸಲು ಸಾಧ್ಯವಿಲ್ಲ. ಹೀಗಾಗಿ, ಹೋದಲ್ಲೆಲ್ಲ ಕೂಲ್ ಕೂಲ್ ವಾತಾವರಣ ಬಯಸುವವರು ಈ 'ರಿಯಾನ್ ಪಾಕೆಟ್' ಕೊಂಡೊಯ್ದು ಥಂಡಾ ಥಂಡಾ ವಾತಾವರಣದ ಅನುಭವ ಪಡೆಯಬಹುದು.

ಸೌತ್ ಚೀನಾ ಮಾರ್ನಿಂಗ್ ಪೋಸ್ಟ್, ಈಚೆಗೆ 'ರಿಯಾನ್ ಪಾಕೆಟ್' ಸಂಬಂಧಿತ ವಿಡಿಯೊವೊಂದನ್ನು ಪ್ರಕಟಿಸಿತ್ತು. ಅದರ ಆಧಾರದ ಮೇಲೆ ಬೇಸಿಗೆ ವೇಳೆಗೆಲ್ಲ ಅಂಗಿಯೊಳಗೆ ತಂಪುಹವೆ ಚೆಲ್ಲುವ ಯಂತ್ರ ಇಟ್ಟುಕೊಳ್ಳಬಹುದು. ಉದ್ದೇಶಿತ ಸಾಧನವನ್ನು ಸೋನಿ ಕಂಪನಿ ಅಭಿವೃದ್ಧಿಪಡಿಸುತ್ತಿದೆ.

ಪುಟ್ಟ ಗಾತ್ರದ ಏರ್ ಕಂಡಿಷನರ್ ಇದಾಗಿದ್ದು, ಹಿಂಭಾಗದ ಪ್ಯಾನೆಲ್ ಮೂಲಕ ಬಿಸಿ ಅಥವಾ ತಂಪು ಗಾಳಿ ಬೀಸುತ್ತದೆ. ಹೀಗಾಗಿಯೇ ಇದು ಎಲ್ಲ ಕಾಲಕ್ಕೂ ಅನುಕೂಲ. ಮೊಬೈಲ್ ಫೋನ್‌ಗಿಂತಲೂ ಪುಟ್ಟದಾಗಿದ್ದು, ಇದನ್ನು ಬಳಸಲು ವಿಶೇಷವಾಗಿ ವಿನ್ಯಾಸಗೊಳಿಸಿದ ಅಂಗಿಯೂ ಅಗತ್ಯ. ರಿಯಾನ್ ಪಾಕೆಟ್‌ಗೆ ಒಗ್ಗುವಂತಹ ಅಂಗಿಗಳನ್ನೂ ಸಹ ಸೋನಿಯೇ ತಯಾರಿಸಿ ಎಸಿ ಜೊತೆಗೆ ಮಾರಾಟ ಮಾಡುವ ಚಿಂತನೆಯಲ್ಲಿದೆ.

## ಸ್ಮಾರ್ಟ್ ಎಸಿಯೂ ಹೌದು

ರಿಯಾನ್ ಪಾಕೆಟ್‌ನ ಮತ್ತೊಂದು ವಿಶೇಷವೆಂದರೆ, ಆ ಸಾಧನ ಹೊರಸೂಸುವ ಗಾಳಿಯ ತಾಪಮಾನವನ್ನು ಸಾಧಾರಣ ಸ್ಮಾರ್ಟ್‌ಫೋನ್‌ನಿಂದಲೇ ನಿಯಂತ್ರಿಸಬಹುದು. ಇದು ವಾತಾವರಣಕ್ಕೆ ಅನುಗುಣವಾಗಿ ಉಷ್ಣತೆಯನ್ನು ತನ್ನಿಂತಾನಾಗಿ ಹೊಂದಿಸುವ ಸ್ವಯಂಚಾಲಿತ ವ್ಯವಸ್ಥೆ ಹೊಂದಿದೆ.

ಪೆಲ್ಟಿಯರ್ ತಂತ್ರಜ್ಞಾನವನ್ನು ಕಾರುಗಳು ಹಾಗೂ ವೈನ್ ಕೂಲರ್‌ಗಳಲ್ಲಿ ಬಳಸಿ ಎ.ಸಿ. ಸಾಧನ ಅಳವಡಿಸಲಾಗುತ್ತದೆ. ಇದೇ ತಂತ್ರಜ್ಞಾನವನ್ನು ಕೊಂಚ ಅಭಿವೃದ್ಧಿಗೊಳಿಸಿ ರಿಯಾನ್ ಪಾಕೆಟ್‌ನಲ್ಲಿ ಬಳಸಿಕೊಳ್ಳಲಾಗಿದೆ. ಬ್ಯಾಟರಿ ಆಧರಿತವಾಗಿ ಅದು ಕಾರ್ಯನಿರ್ವಹಿಸಲಿದ್ದು ಒಮ್ಮೆ ಚಾರ್ಜ್ (ಎರಡು ಗಂಟೆವರೆಗೆ) ಮಾಡಿದರೆ ಸುಮಾರು 90 ನಿಮಿಷಗಳವರೆಗೆ ಇದು ಕಾರ್ಯನಿರ್ವಹಿಸುತ್ತದೆ.

## ಕ್ರೌಡ್ ಫಂಡಿಂಗ್

'ರಿಯಾನ್ ಪಾಕೆಟ್' ಯೋಜನೆ ಸಂಬಂಧ ಸೋನಿಯು ಕ್ರೌಡ್ ಫಂಡಿಂಗ್ (ಆನ್‌ಲೈನ್ ಮೂಲಕ ನಿಧಿ ಸಂಗ್ರಹಿಸುವ ಅಭಿಯಾನ) ಆರಂಭಿಸಿದೆ. ಯೋಜನೆಗೆ ಹಣ ನೀಡಿದವರಿಗೆ ಕಂಪನಿ ವತಿಯಿಂದ ಕೆಲವೊಂದು ಅನುಕೂಲಗಳು ಸಿಗಲಿದ್ದು, ಸಾಕಷ್ಟು ಮಂದಿ ಕ್ರೌಡ್ ಫಂಡಿಂಗ್ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಬಹುತೇಕ ಕ್ರೌಡ್ ಫಂಡಿಂಗ್ ಯೋಜನೆಗಳು ಕಾರ್ಯಗತವಾಗದೆ, ಪರಿಕಲ್ಪನೆಯಲ್ಲೇ ಕಳೆದುಹೋಗುವ ಸಾಧ್ಯತೆಗಳನ್ನೂ ತಳ್ಳಿ ಹಾಕುವಂತಿಲ್ಲ. ಆದರೂ, ಈ ಯೋಜನೆ ಕಾರ್ಯಗತವಾಗಲಿ ಎಂದು ಬಯಸುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿದೆ. ಇದರ ಬೆಲೆ 130 ಡಾಲರ್ ಅಂದರೆ ಸುಮಾರು 9,200 ರೂಪಾಯಿ ಆಗಬಹುದು.

■ ಸಿರಿ

## ಫ್ಲಿಪ್‌ಕಾರ್ಟ್ ಮೂವಿಸ್

ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್ ಡಿಜಿಟಲ್ ಪ್ಲಾಟ್‌ಫಾರ್ಮ್ ಸಾಲಿಗೆ, ವಿಶ್ವದ ಅತಿದೊಡ್ಡ ರಿಟೈಲ್ ಮಾರಾಟ ಕಂಪನಿ ವಾಲ್‌ಮಾರ್ಟ್ ಪಾಲುದಾರಿಕೆಯ ಫ್ಲಿಪ್‌ಕಾರ್ಟ್ ಆನ್‌ಲೈನ್ ಮಾರುಕಟ್ಟೆ ಸಂಸ್ಥೆಯು ಸೇರಲು ಸಿದ್ಧತೆ ನಡೆಸಿದೆ.

ದೇಶದಲ್ಲಿ ತನ್ನ ಮಾರುಕಟ್ಟೆ ಜಾಲ ವಿಸ್ತರಣೆ ಹಾಗೂ ಹೆಚ್ಚಿನ ಗ್ರಾಹಕರನ್ನು ಸೆಳೆಯುವ ಸಲುವಾಗಿ ಫ್ಲಿಪ್‌ಕಾರ್ಟ್, ತನ್ನ ಆ್ಯಪ್‌ನಲ್ಲಿ ಚಲನಚಿತ್ರ, ವಿಡಿಯೊ ಸ್ಟ್ರಿಮಿಂಗ್ ಸೇವೆ ಒದಗಿಸಲಿದೆ. ನೆಟ್‌ಫ್ಲಿಕ್ಸ್ ಹಾಗೂ ಅಮೆಜಾನ್ ಪ್ರೈಮ್ ರೀತಿಯೇ ಫ್ಲಿಪ್‌ಕಾರ್ಟ್ ಆ್ಯಪ್ ಮೂಲಕ ಚಲನಚಿತ್ರ, ಶಾರ್ಟ್ ವಿಡಿಯೊ ಮತ್ತು ವೆಬ್ ಸಿರೀಸ್‌ಗಳನ್ನು ತನ್ನ ಗ್ರಾಹಕರಿಗೆ ಒದಗಿಸಲಿದೆ.

ಕಡಿಮೆ ದರಕ್ಕೆ ಲಭ್ಯವಾಗುತ್ತಿರುವ ಇಂಟರ್‌ನೆಟ್ ಮತ್ತು ಸ್ಮಾರ್ಟ್‌ಫೋನ್ ಮಾರುಕಟ್ಟೆಯ ವಿಸ್ತಾರದಿಂದ ವಿಡಿಯೊ ಸಂಬಂಧಿತ ಸೇವೆಗಳು ಜನಪ್ರಿಯವಾಗುತ್ತಿವೆ. ಹೀಗಾಗಿ ಇಂಟರ್‌ನೆಟ್ ಆಧಾರಿತ ವಿಡಿಯೊ ಸ್ಟ್ರಿಮಿಂಗ್ ಸೇವೆಗಳಿಗೆ ಈಚೆಗೆ ಅಧಿಕ ಬೇಡಿಕೆ ಹೆಚ್ಚಾಗಿದ್ದು, ಅದನ್ನೇ ಆಧಾರವಾಗಿಟ್ಟುಕೊಂಡು ವಿಡಿಯೊ ಮತ್ತು ಮನರಂಜನೆ ಲೋಕಕ್ಕೂ ಕಾಲಿಡಲು ಫ್ಲಿಪ್‌ಕಾರ್ಟ್ ಮುಂದಾಗಿದೆ.

## ಮೆಸೇಜೂ ಓದುತ್ತೆ ಗೂಗಲ್ ಅಸಿಸ್ಟೆಂಟ್

ಧ್ವನಿ ಆದೇಶವನ್ನು ಗುರುತಿಸಿ ಕಾರ್ಯನಿರ್ವಹಿಸುವ ಗೂಗಲ್ ಅಸಿಸ್ಟೆಂಟ್ ತಂತ್ರಾಂಶವು ಹುಡುಕಾಟ, ಅಲಾರ್ಮ್, ರಿಮೈಂಡರ್ ಸೇರಿದಂತೆ ಮೊಬೈಲ್‌ನ ಬಳಕೆಗೆ ಹಲವಾರು ರೀತಿಯಲ್ಲಿ ನೆರವಿಗೆ ಬರುತ್ತಿದೆ.

ಆದರೆ, ಗೂಗಲ್ ಅಸಿಸ್ಟೆಂಟ್ ಥರ್ಡ್ ಪಾರ್ಟಿ ಆ್ಯಪ್ ಜತೆಗೆ ಕೆಲಸ ಮಾಡದ ಕೊರತೆ ಇತ್ತು. ಇದನ್ನು ಗ್ರಹಿಸಿದ ಗೂಗಲ್ ಈ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು, ಗೂಗಲ್ ಅಸಿಸ್ಟೆಂಟ್‌ನ ಅಪ್‌ಡೇಟೆಡ್ ವರ್ಷನ್ ಥರ್ಡ್ ಪಾರ್ಟಿ ಆ್ಯಪ್ ಜತೆಗೆ ಕೆಲಸ ಮಾಡುತ್ತಿದೆ.

ಇದರಿಂದ ವಾಟ್ಸ್‌ಆ್ಯಪ್, ಸ್ಲ್ಯಾಕ್ ಮತ್ತು ಟೆಲಿಗ್ರಾಂ ಮೆಸೇಜ್‌ಗಳನ್ನು ಗೂಗಲ್ ಅಸಿಸ್ಟೆಂಟ್ ಧ್ವನಿ ಆದೇಶದ ಮೇರೆಗೆ ಓದುತ್ತದೆ. ಜೊತೆಗೆ ಅದಕ್ಕೆ ಪ್ರತಿಕ್ರಿಯೆಯನ್ನು ಬಳಕೆದಾರರ ಆದೇಶದ ಮೇರೆಗೆ ನೀಡುತ್ತದೆ. ಕೆಲಸ ಕಾರ್ಯದ ನಡು ನಡುವೆ ಸಾಮಾನ್ಯ ಸಂದೇಶ ಹಾಗೂ ವಾಟ್ಸ್‌ಆ್ಯಪ್ ಬಳಸುವವರಿಗೆ ಇದು ನೆರವಾಗಲಿದೆ. ಈ ಸೇವೆ ಸದ್ಯದ ಮಟ್ಟಿಗೆ ಆಯ್ದ ಬಳಕೆದಾರರಿಗೆ ಲಭ್ಯವಿದ್ದು, ಕೆಲ ದಿನಗಳಲ್ಲಿಯೇ ಎಲ್ಲರಿಗೂ ಸಿಗಲಿದೆ. ಆದರೆ, ಇಂಗ್ಲಿಷ್ ಭಾಷೆಯ ಸಂವಹನಕ್ಕೆ ಮಾತ್ರ ಇದು ಸ್ಪಂದಿಸುತ್ತಿದೆ.